ವಿಜಯವಾಣಿ
ಕನ್ನಡಿಗರ ಧ್ವನಿ

# ಅಖಿಲ ಭಾರತ ಅಂತರ ವಿವಿ ಈಜು: ಕೂಟ ದಾಖಲೆಯೊಂದಿಗೆ 2 ಸ್ವರ್ಣ ಗೆದ್ದ ಮೀನಾಕ್ಷಿ

**ಬೆಂಗಳೂರು:** ಜೈನ್ ವಿಶ್ವವಿದ್ಯಾಲಯದ ಮೀನಾಕ್ಷಿ ವಿಕೆಆರ್, ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಈಜು ಚಾಂಪಿಯನ್‌ಷಿಪ್‌ನ ಮಹಿಳೆಯರ 50 ಮೀಟರ್ ಬಟರ್ ಫ್ಲೈ ಹಾಗೂ 100 ಮೀ ಬಟರ್ ಫ್ಲೈ ವಿಭಾಗದಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನದ ಪದಕ ಗೆದ್ದುಕೊಂಡರು. ಇದರಿಂದ ಮೀನಾಕ್ಷಿ ಕೂಟದಲ್ಲಿ ಮೂರು ದಾಖಲೆ ನಿರ್ಮಿಸಿದಂತಾಗಿದೆ. ಕೂಟದ 2ನೇ ದಿನವಾದ ಸೋಮವಾರ ಅವರು 400 ಮೀ ಮೆಡ್ಲೆ ವಿಭಾಗದಲ್ಲಿ ಕೂಟ ದಾಖಲೆ ಬರೆದಿದ್ದರು.




ಕನಕಪುರದ ಜೈನ್ ವಿವಿ ಕ್ಯಾಂಪಸ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ 3ನೇ ದಿನವಾದ ಮಂಗಳವಾರ, ಅಂತಾರಾಷ್ಟ್ರೀಯ ಈಜುಪಟು ಮೀನಾಕ್ಷಿ 50 ಮೀಟರ್ ಬಟರ್‌ಫ್ಲೈ ವಿಭಾಗದಲ್ಲಿ 31.66 ಸೆಕೆಂಡ್‌ಗಳಲ್ಲಿ ಕ್ರಮಿಸಿ ಕೂಟ ದಾಖಲೆಯೊಂದಿಗೆ ಮೊದಲ ಸ್ಥಾನ ಪಡೆದರು. ಈ ಮೊದಲು ತಾವೇ ನಿರ್ಮಿಸಿದ್ದ (32.24ಸೆ) ದಾಖಲೆ ಹಿಂದಿಕ್ಕಿದರು. ಇನ್ನು 100 ಮೀ ಬಟರ್ ಫ್ಲೈ ವಿಭಾಗದಲ್ಲಿ ಮೀನಾಕ್ಷಿ 1 ನಿ.06.32ಸೆಕೆಂಡ್‌ಗಳಲ್ಲಿ ಕ್ರಮಿಸಿ ನೂತನ ದಾಖಲೆ ಬರೆದರು. ಈ ಮೊದಲು ಬೆಳಗಾವಿಯ ವಿಟಿಯುನ ಪೂಜಾ ಆಳ್ವಾ (1ನಿ.06.47ಸೆ) ನಿರ್ಮಿಸಿದ್ದ ದಾಖಲೆ ಅಳಿಸಿಹಾಕಿದರು.

**ಫಲಿತಾಂಶ: ಪುರುಷರು (ವಿಜೇತರು ಮಾತ್ರ): 50 ಮೀಟರ್ ಬ್ಯಾಕ್ ಸ್ಟ್ರೋಕ್:** ಅರವಿಂದ್ ಎಂ (ವಿಟಿಯು, 27.90ಸೆ), **100 ಮೀ ಫ್ರೀಸ್ಟೈಲ್:** ಅಮಾನ್ ಘಾಯಿ (ಗುರುನಾನಕ್ ವಿವಿ, 57.37ಸೆ), **400 ಮೀ ಫ್ರೀಸ್ಟೈಲ್:** ಸೌರಭ್ ಸಾಂಗ್ವೆಕರ್ (ಮುಂಬೈ ವಿವಿ, 4ನಿ.04.59ಸೆ), **4/200 ಫ್ರೀ ಸ್ಟೈಲ್ ರಿಲೇ:** ವಿಟಿಯು ಬೆಳಗಾವಿ (8ನಿ.44.23ಸೆ). **ಮಹಿಳೆಯರು: 50ಮೀಟರ್ ಬ್ಯಾಕ್‌ಸ್ಟ್ರೋಕ್:** ಮೀನಾಕ್ಷಿ ವಿಕೆಆರ್ (ಜೈನ್ ವಿವಿ, 31.66ಸೆ), **100 ಮೀ ಫ್ರೀಸ್ಟೈಲ್:**ಮೀನಾಕ್ಷಿ ವಿಕೆಆರ್ (ಜೈನ್ ವಿವಿ, 1ನಿ.06.32ಸೆ), **400 ಮೀ ಫ್ರೀಸ್ಟೈಲ್:** ಸ್ನೇಹಾ ಟಿ (ಆರ್‌ಜಿಯುಎಚ್‌ಎಸ್, 4 ನಿ.48.97ಸೆ), **4/200ಮೀ ಫ್ರೀಸ್ಟೈಲ್ ರಿಲೇ:** ದೆಹಲಿ ವಿಶ್ವವಿದ್ಯಾಲಯ (9ನಿ.49.56ಸೆ).

**ಡೈವಿಂಗ್: ಪುರುಷರು: 3 ಎಂ ಸ್ಪ್ರಿಂಗ್ ಬೋರ್ಡ್:** ಅಜಯ್ ಬಿ (ಬಿಎಚ್‌ಎ, 243.40), **ಮಹಿಳೆಯರು:** ದಿವ್ಯಾ ತೇಜಾ (ವಿಟಿಯು, 156.45).